## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ, ಸಂಚಾರಿ ನ್ಯಾಯಾಲಯ ತಾಳಿಕೋಟಿ.

## ಸಿ.ಸಿ.5804/2024

ಪಿರ್ಯಾದುದಾರಃ

ಕಲಕೇರಿ ಪಿ.ಎಸ್. ಕಲಕೇರಿ.

**-ವಿರುದ್ಧ-**

ಆರೋಪಿಃ

ಸಿದ್ದನಗೌಡ ಪಾಟೀಲ ತಂದೆ ಬಸನಗೌಡ @ ಬಸವನಗೌಡ ಪಾಟೀಲ,
ವಯಾಃ 28 ವರ್ಷ ಉಃ ಚಾಲಕ,
ಸಾಃ ಗೋಟಖಂಡಕಿ, ತಾಃ ತಾಳಿಕೋಟಿ.

ಕಲಂಃ**313** ರ ಸಿ.ಆರ್.ಪಿ.ಸಿ ಅಡಿಯಲ್ಲಿ ಆರೋಪಿಯ ಹೇಳಿಕೆ

01. ನೀವು ಇಲ್ಲಿಯವರೆಗೆ ಆದ ಅಭಿಯೋಜನಾ ಪರ ಸಾಕ್ಷಿಗಳನ್ನು ಕೇಳಿದ್ದೀರಾ**?**
ಉತ್ತರಃ

02. ಪ್ರಾಸಾಃ1 ಲಕ್ಷ್ಮಿ ಕುರಿ ಉರ್ಫ ಕುಂಟೋಜಿ ಇವರು ತಮ್ಮ ಸಾಕ್ಷ್ಯದಲ್ಲಿ" 2009 ನೇ ಸಾಲಿನಲ್ಲಿ ನಾನು ರೇವಣಸಿದ್ದಪ್ಪ ಎಂಬ ವ್ಯಕ್ತಿಯೊಂದಿಗೆ ಮದುವೆಯಾಗಿರುತ್ತೇನೆ. ನನಗೆ ಪ್ರಜ್ವಲ ಮತ್ತು ಗಂಗಾ ಈ ರೀತಿ ಇಬ್ಬರು ಮಕ್ಕಳು, ನಾನು ಗೊಟಗುಣಕಿ ಗ್ರಾಮದಲ್ಲಿ ನನ್ನ ಗಂಡ, ನನ್ನ ಮಕ್ಕಳು ಮತ್ತು ನನ್ನ ಅತ್ತೆಯಾಂದಿಗೆ ವಾಸವಿದ್ದೆವು. ದಿನಾಂಕ.12.12.2019 ರಂದು ರಾತ್ರಿ 10.00 ಗಂಟೆಗೆ ನನ್ನ ಗಂಡ ಹಾಗು ನಮ್ಮ ಊರಿನ ಸಿದ್ದನಗೌಡ ಪಾಟೀಲ ಮತ್ತು ರಜಾಕ ಮುಲಾ 3 ಜನ ಸೇರಿ 1 ಕಾರಿನಲ್ಲಿ ಕಲಕೇರಿ ಗ್ರಾಮದಲ್ಲಿ ನಡೆದ ನಾಟಕ ನೋಡಲು ಹ ೋಗಿದ್ದರು. ದಿಃ13.12.2019 ರಂದು ನನ್ನ ಗಂಡನ ಸೋದರತ್ತೆ ಮೃತಪಟ್ಟಿದ್ದರಿಂದ ಅವರ ಶವ ಸಂಸ್ಕಾರ ಮುಗಿಸಿಕೊಂಡು ದಿನಾಂಕ.13.12.2019 ರಂದು ರಾತ್ರಿ 8 ಗಂಟೆಗೆ ಬಂದಾಗ ನನ್ನ ಗಂಡ ಈತನು ಮನೆಯಲ್ಲಿ ನೋವಿನಿಂದ ಬಳಲುತ್ತಾ ಮಲಗಿದ್ದನು ಆಗ ನಾನು ನನ್ನ ಗಂಡನಿಗೆ ಏನಾಗಿದೆ ಎಂದು ವಿಚಾರಿಸಲು ಆಗ ನನ್ನ ಗಂಡ ಸಿದ್ದನಗೌಡ ಪಾಟೀಲ ಮತ್ತು ರಜಾಕ ಮುಲಾ 3 ಜನ ಸೇರಿ ಕೆಎ -01 ಎಸಿ8006 ನಂಬರಿನ ಟಾಟಾ ಇಂಡಿಕಾ ಕಾರಿನಲ್ಲಿ ಕಲಕೇರಿ ಗ್ರಾಮದಲ್ಲಿ ನಡೆದ ನಾಟಕ ನೋಡಲು ಹೋಗಿ ವಾಪಸ್ಸು ಬರುವ ಸಮಯದಲ್ಲಿ ಕಾರನ್ನು ಚಾಲಯಿಸುತ್ತಿದ್ದ ಸಿದ್ದನಗೌಡ ಪಾಟೀಲ ಅತಿವೇಗವಾಗಿ ಸದರಿ ವಾಹನವನ್ನು ನಡೆಸುತ್ತಿದ್ದು, ನನ್ನ ಗಂಡ ಸದರಿಯವನಿಗೆ ವಾಹನ ನಿಧಾನಕ್ಕೆ ನಡೆಸು ಅಂತಾ ಹೇಳಿದರೂ ಸಹ ಸದರಿಯವನು ಅತಿವೇಗವಾಗಿ ನಿರ್ಲಕ್ಷ್ಯತನದಿಂದ ವಾಹನ ಚಲಾಯಿಸಿ ಅಸಕಿ ಗ್ರಾಮ ದಾಟಿ ಮರಮ್ಮನ ದೇವಸ್ಥಾನ ಹತ್ತಿರ ಇರುವಾಗ ಸದರಿ ಕಾರು

ಪಲ್ಟಿಯಾಗಿ ಬಿದ್ದಿದ್ದು, ಪರಿಣಾಮ ನನ್ನ ಗಂಡನ ಹೊಟ್ಟೆಯ ಹತ್ತಿರ ಪೆಟ್ಟಾಗಿದ್ದು ಮತ್ತು ರಜಾಕ ಮುಲಾ, ಈತನಿಗೆ ಬಲ ಮುಂಡಿಗೆ ಭಾರಿ ಗಾಯ ಆಗಿರುತ್ತದೆ. ಆಗ ದಿನಾಂಕ.13.12.2019 ರ ಬೆಳಗಿನ ಜಾವ 3-4 ಗಂಟೆ ಆಗಿತ್ತು ಎಂದು ನನ್ನ ಗಂಡ ನನಗೆ ತಿಳಿಸಿರುತ್ತಾನೆ. ಆಗ ಆರೋಪಿ ಸಿದ್ದನಗೌಡ ನನ್ನ ಗಂಡನಿಗೆ ತಾಳಿಕೋಟಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮತ್ತೆ ಮನೆಗೆ ಕರೆದುಕೊಂಡು ಬಂದು ಬಿಟ್ಟು ಹೋಗಿರುತ್ತಾನೆ ಅಂತಾ ನನ್ನ ಮುಂದೆ ಹೇಳಿರುತ್ತಾನೆ. ನಂತರ ದಿನಾಂಕ:14.12.2019 ರಂದು ಬೆಳಿಗ್ಗೆ 6 ಗಂಟೆ ಸುಮಾರಿಗೆ ನನ್ನ ಗಂಡ ತನ್ನ ಹೊಟ್ಟೆ ತ್ರಾಸು ಮಾಡಿಕೊಳ್ಳುತಾ ನರಳಾಡುತ್ತಿದ್ದ ಆಗ ನಾನು ಮತ್ತು ನನ್ನ ಅತ್ತೆ ಸೇರಿ ಖಾಸಗಿ ವಾಹನದಲ್ಲಿ ನನ್ನ ಗಂಡನಿಗೆ ತಾಳಿಕೋಟಿ ಆಸ್ಪತ್ರೆ ಕರೆದುಕೊಂಡು ಹೋಗುವಾಗ ತಾಳಿಕೋಟಿ ಸಮೀಪ ಇದ್ದಾಗ ಬೆಳಿಗ್ಗೆ 7.00 ಗಂಟೆಗೆ ನನ್ನ ಗಂಡ ಮರಣ ಹೊಂದಿರುತ್ತಾನೆ. ನಂತರ ನಾನು ಕಲಕೇರಿ ಪೊಲೀಸ್ ಠಾಣೆಗೆ ಹೋಗಿ ನಾನು ಆರೋಪಿ ಮೇಲೆ ದೂರು ದಾಖಲಿಸಿರುತ್ತೇನೆ. ನಿಪಿ1 ಚಾಸಾ-7 ರವರಿಂದ ಬರೆಸಿದ್ದೇನೆ. ನಂತರ ಪೊಲೀಸ್ ಅಧಿಕಾರಿಗಳು ನಮ್ಮ ಮನೆಗೆ ಬಂದು ಭೇಟಿ ನೀಡಿದ್ದರು. ದಿ 14.12.2019 ರಂದು ಪೊಲೀಸ್ ಅಧಿಕಾರಿಗಳು ಶವ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ, ಶವ ಪಂಚನಾಮೆ ದಿಃ14.12.2019 ರಂದು ಮದ್ಯಾಹ್ನ 3.30 ರಿಂದ 4.50 ರವರೆ ಮಾಡಿರುತ್ತಾರೆ, ಶವ ಪಂಚನಾಮೆ ಜರುಗಿಸುವ ಕಾಲಕ್ಕೆ ಚಾಸಾ-2 ಮತ್ತು 3 ಉಪಸ್ಥಿತರಿದ್ದರು, ದಿಃ14.12.2019 ರಂದು ಸಾಯಂಕಾಲ 5.15 ರಿಂದ 6.15 ರವರೆಗೆ ಚಾಸಾ-2 ಮತ್ತು 3 ರವರ ಉಪಸ್ಥಿತಿಯಲ್ಲಿ ಪೊಲೀಸ್ ಅಧಿಕಾರಿಗಳು ಘಟನಾ ಸ್ಥಳದ ಪಂಚನಾಮೆ ಮಾಡಿರುತ್ತಾರೆ. ನಾನು ಘಟನಾ ಸ್ಥಳ ತೋರಿಸಿದ್ದೇನೆ. ಘಟನಾ ಸ್ಥಳದಲ್ಲಿ ಅಪಘಾತಕ್ಕೀಡಾದ ವಾಹನ ಇತ್ತು. ಆ ದಿನ ವಾಹನದಲ್ಲಿ ಗಾಯಗೊಂಡ ರಜಾಕ್ ಈತನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾನೆ ಎಂದು ನಾನು ಮರು ಹೇಳಿಕೆ ನೀಡಿದ್ದೇನೆ'' ಎಂದು ಹೇಳುತ್ತಾರೆ ಇದಕ್ಕೆ ನಿವೇನು ಹೇಳುವಿರಿ?.

ಉತ್ತರಃ

03. ಪ್ರಾಸಾಃ7 ಈರಗೆಂಟಪ್ಪ ತಳೊಳ್ಳಿ ಇವರು ತಮ್ಮ ಸಾಕ್ಷ್ಯದಲ್ಲಿ" ದಿ.14-12-2019 ರಂದು ನಾನು ಕರ್ತವ್ಯದಲ್ಲಿದ್ದಾಗ 4-35 ರಿಂದ 5-20 ಗಂಟೆ ವರೆಗೆ ರೇವಣಸಿದ್ದಪ್ಪ ನಾಗಪ್ಪ ಕುರಿ ಉರ್ಫ ಕುಂಟೋಜಿ ಇವರ ಮೃತ ದೇಹದ ವೈದ್ಯಕೀಯ ಮರಣೋತ್ತರ ಪರೀಕ್ಷೆ ಜರುಗಿಸಿರುತ್ತೇನೆ. ಸದರಿ ರೇವಣಸಿದ್ದಪ್ಪ ನಾಗಪ್ಪ ಕುರಿ ಉರ್ಫ ಕುಂಟೋಜಿ ರಸ್ತೆ ಅಪಘಾತದಲ್ಲಿ ಮರಣಹೊಂದಿದ್ದು ಆತನ ಹೊಟ್ಟೆ ಭಾಗಕ್ಕೆ ಬಲವಾದ ಪೆಟ್ಟು ಬಿದ್ದು ಹೊಟ್ಟೆ ಆಂತರಿಕ ಭಾಗದಲ್ಲಿ ರಕ್ತಸ್ರಾವ ಆಗಿ ಆತನ ಕರುಳುಗಳ ಮೇಲೆ ಹರಿತದ ಗಾಯ ಆಗಿತ್ತು. ಆದ್ದರಿಂದ ಆತನು ಮರಣ ಹೊಂದಿರುತ್ತಾನೆ ಎಂದು ನಿಪಿಃ9 ಪೊಲೀಸ ಅಧಿಕಾರಿಗಳಿಗೆ ನೀಡಿರುತ್ತೇನೆ'' ಎಂದು ಹೇಳುತ್ತಾರೆ ಇದಕ್ಕೆ ನಿವೇನು ಹೇಳುವಿರಿ?.

ಉತ್ತರಃ

04. ಪ್ರಾಸಾಃ8 ಶಿವಪ್ಪ ಬಿರಾದಾರ ಇವರು ತಮ್ಮ ಸಾಕ್ಷ್ಯದಲ್ಲಿ" ಚಾಸಾ-13 ಹೇಳಿದಂತೆ ದಿ.14.12.2019 ರಂದು ಕಲಕೇರಿ ಠಾಣಾ ಗುನ್ನಾ ನಂಬರ 115/19 ರಲ್ಲಿ

ಅಪಘಾತದಲ್ಲಿ ಮರಣ ಹೊಂದಿದ ಶವ ಪಂಚನಾಮೆ ಮತ್ತು ಘಟನಾ ಸ್ಥಳದ ಪಂಚನಾಮೆ ಬರೆದಿರುತ್ತೇನೆ. ಚಾಸಾ-13 ರವರು ಪಡೆದ ಸಾಕ್ಷಿ ಹೇಳಿಕೆಯನ್ನು ಇಲಾಖೆಯ ಲ್ಯಾಪ್ಟಾಪನಲ್ಲಿ ಟೈಪ ಮಾಡಿರುತ್ತೇನೆ. ಶವ ಪಂಚನಾಮೆಗೆ ಮತ್ತು ಘಟನಾ ಸ್ಥಳದ ಪಂಚನಾಮೆಗೆ ಪೊಟೊ ಸೆರೆ ಹಿಡಿದಿರುತ್ತೇನೆ, ನಿಪಿ5 ಶವಪಂಚನಾಮೆ ಬರೆಯುವಾಗ ನನ್ನ ಮೊಬೈಲನ ಕ್ಯಾಮರಾದಿಂದ ಸೆರೆ ಹಿಡಿದಿರುತ್ತೇನೆ. ನಿಪಿ3 ಮತ್ತು 5 ಅನ್ನು ಸಿಂದಗಿಯ ಕುಶಿಯಾ ಪೊಟೋ ಸ್ಟುಡಿಯದಲ್ಲಿ ಪ್ರಿಂಟ್ ಹಾಕಿಸಿ ಚಾಸಾ-13 ರವರಿಗೆ ಒಪ್ಪಿಸಿರುತ್ತೇನೆ. ದಿ.22.12.2019 ರಂದು ಚಾಸಾ-14 ರವರ ಮುಂದೆ ಅವರ ಸಿಂದಗಿ ಕಚೇರಿಯಲ್ಲಿ ಹೇಳಿಕೆ ನೀಡಿರುತ್ತೇನೆ'' ಎಂದು ಹೇಳುತ್ತಾರೆ ಇದಕ್ಕೆ ನಿವೇನು ಹೇಳುವಿರಿ?.

ಉತ್ತರಃ

05. ಪ್ರಾಸಾಃ9 ಡಾಃಸಂತೋಷ ಕಂಗೋಡಿ ಇವರು ತಮ್ಮ ಸಾಕ್ಷ್ಯದಲ್ಲಿ" ದಿಃ13.12.2019 ರಂದು ಬೆಳಿಗ್ಗೆ 8 ಗಂಟೆ ಸುಮಾರು ರಸ್ತೆ ಅಪಘಾತದ ಹಿನ್ನಲೆಯಲ್ಲಿ ರಜಾಕ ಮುಲ್ಲಾ ನನ್ನು ಆತನ ಸಂಬಂಧಿಕರು ನಮ್ಮ ಸಿದ್ದಬಸವ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದರು. ಚಾಸಾ-8 ರವರಿಗೆ ಪ್ರಾಥಮಿಕ ಚಿಕಿತ್ಸೆಗೆ ಒಳಪಡಿಸಿ ಪ್ರಾಥಮಿಕ ಚಿಕಿತ್ಸೆ ನೀಡಿರುತ್ತೇನೆ. ಚಾಸಾ-8 ರವರ ಪ್ರಾಥಮಿಕ ಪರೀಕ್ಷೆಯಲ್ಲಿ ಆತನ ಬಲ ಕಾವಿಕಲ ಮೂಳೆ ಮುರಿತ ಕಂಡುಬಂದಿದ್ದು ಆತನ ಲಂಬೋಸ್ಯಾಟರಲ ಸ್ಪೈನ ನಲ್ಲಿ ಬಲವಾದ ಪೆಟ್ಟು ಕಂಡು ಬಂದಿರುತ್ತದೆ. ದಿ.10.04.2020 ರಂದು ಸಿಂದಗಿ ಸರ್ಕಲ ಪೊಲೀಸ್ ಇನ್ಸಪೆಕ್ಟರ ಇವರಿಗೆ ಚಾಸಾ-8 ರವರಿಗೆ ಸಂಬಂಧಿಸಿದಂತೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ'' ಎಂದು ಹೇಳುತ್ತಾರೆ ಇದಕ್ಕೆ ನಿವೇನು ಹೇಳುವಿರಿ?.

ಉತ್ತರಃ

06. ಪ್ರಾಸಾಃ10 ರೇಣುಕಾ ಹಳ್ಳಿ ಇವರು ತಮ್ಮ ಸಾಕ್ಷ್ಯದಲ್ಲಿ" ದಿ.14.12.19 ರಂದು ಮದ್ಯಾಹ್ನ 2.15 ಕ್ಕೆ ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸಾ-1 ಠಾಣೆಗೆ ಹಾಜರಾಗಿ ಲಿಖಿತ ದೂರು ಸಲ್ಲಿಸಿದ್ದರು. ಸಾಕ್ಷಿ ಸದರಿ ಲಿಖಿತ ದೂರು ನೋಡಿ ಗುರುತಿಸಿದ್ದು, ಸದರಿ ದೂರನ್ನು ಈಗಾಗಲೆ ನಿಪಿ1 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ1 ಸಿ ಎಂದು ಗುರುತಿಸಲಾಯಿತು. ಚಾಸಾ-1 ದೂರಿನಲ್ಲಿ 12.12.19 ರಂದು ರಾತ್ರಿ 10 ಗಂಟೆಗೆ ಕಲಕೇರಿ ಜಾತ್ರೆಯಲ್ಲಿ ನಾಟಕ ನೋಡಲು ಅವಳ ಗಂಡ ರೇವಣಸಿದ್ದಪ್ಪ, ಸಿದ್ದನಗೌಡ ಮತ್ತು ರಜಾಕ 3 ಜನ ಇಂಡಿಕಾ ಕಾರನಲ್ಲಿ ಹೋಗಿದ್ದು, ಆರೋಪಿ ಸದರಿ ಕಾರ ಅತಿಜೋರಾಗಿ ನಿರ್ಲಕ್ಷ್ಯತನದಿಂದ ಚಲಾಯಿಸಿದ್ದರಿಂದ ಆಕೆಯ ಗಂಡ ತೀವ್ರವಾಗಿ ಗಾಯಗೊಂಡಿದ್ದು, ಗಾಯಗೊಂಡ ಆಕೆಯ ಗಂಡನನ್ನು ಆರೋಪಿ ಮತ್ತು ರಜಾಕ ಅವರ ಮನೆಗೆ ತಂದು ಬಿಟ್ಟಿರುತ್ತಾರೆ ಎಂದು ಮತ್ತು ಚಾಸಾ-1 ರವರ ಗಂಡನನ್ನು ಚಾಸಾ-1 ಕೇಳಲಾಗಿ ಚಾಸಾ-1 ರವರ ಗಂಡ ಆರೋಪಿ ಚಲಾಯಿಸುತ್ತಿದ್ದ ಇಂಡಿಕಾ ಕೆಎ 01 ಎ ಸಿ 8006 ಅತಿಜೋರಾಗಿ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿ ಅಸಕಿ ಗ್ರಾಮದ ಮರೆಮ್ಮನ ದೇವಾಸ್ಥಾನದ ಬಳಿ ಸದರಿ ಗಾಡಿ ಪಲ್ಟಿ ಹೊಡೆದು ಚಾಸಾ-1 ರವರ ಹೊಟ್ಟೆ ಹತ್ತಿರ ಮತ್ತು ರಜಾಕ್ (ಚಾಸಾ-8) ರವರ ಬಲಗೈ ಹತ್ತಿರ ಗಾಯವಾಗಿದ್ದು, ಆಗ ಸಮಯ ಬೆಳಗಿನ ಜಾವ 3.30 ಆಗಿದ್ದು ಆರೋಪಿ ಚಾಸಾ1 ರವರ ಗಂಡನಿಗೆ ತಾಳಿಕೋಟಿಯ

ಸಿದ್ಧಬಸವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮನೆಗೆ ತಂದು ಬಿಟ್ಟಿರುವ ಬಗ್ಗೆ ಚಾಸಾ-1 ರವರ ಗಂಡ ರೇವಣಸಿದ್ದಪ್ಪ ಚಾಸಾ-1 ರವರಿಗೆ ಹೇಳಿರುತ್ತಾನೆ ಎಂದು ತಿಳಿಸಿರುತ್ತಾರೆ. ನಂತರ ಚಾಸಾ-1 ರವರ ಗಂಡನಿಗೆ ದಿ.14.12.19 ರ ಬೆಳಗಿನ 6 ಗಂಟೆ ಸುಮಾರು ಆರೋಗ್ಯ ಕೆಟ್ಟಿದ್ದು ನರಳಾಡುತ್ತಿದ್ದಾಗ ಚಾಸ-1, 4, ಉಪಚಾರ ಕುರಿತು ಖಾಸಗಿ ವಾಹನದಲ್ಲಿ ತಾಳಿಕೋಟಿಗೆ ಕರೆದುಕೊಂಡು ಹೋಗುವಾಗ ಮಾರ್ಗ ಮದ್ಯದಲ್ಲಿ ಬೆಳಿಗ್ಗೆ 8 ಗಂಟೆ ಸುಮಾರು ಚಾಸಾ1 ರವರ ಗಂಡ ರೇವಣಸಿದ್ದ ಮರಣ ಹೊಂದಿರುತ್ತಾನೆ ಎಂದು ಚಾಸಾ-1 ಮತ್ತು 3 ಪೊಲೀಸ್ ಠಾಣೆಗೆ ಹಾಜರಾಗಿ ನಿಪಿ1 ಲಿಖಿತ ದೂರು ದಾಖಲಿಸಿರುತ್ತಾರೆ. ಕಲಕೇರಿ ಠಾಣಾ ಗುನ್ನಾ ನಂಬರ 115/19 ದಾಖಲಿಸಿರುತ್ತೇನೆ. ದೂರು ದಾಖಲಿಸಿಕೊಂಡ ನಂತರ ದಿ.14.12.19 ರಂದು ತಾಳಿಕೋಟಿ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ಮೃತ ಶರೀರದ ಶವಪಂಚನಾಮೆ ಚಾಸಾ-2 ಮತ್ತು 3 ರವರ ಉಪಸ್ಥಿತಿಯಲ್ಲಿ ಜರುಗಿಸಿರುತ್ತೇನೆ. ನಿಪಿ4 ಮದ್ಯಾಹ್ನ 3.30 ರಿಂದ 4.30 ರವರೆಗು ಬರೆದಿರುತ್ತೇವೆ. ನಂತರ ಚಾಸಾ-1 ರವರ ಪುನಃ ಹೇಳಿಕೆ ದಾಖಲಿಸಿಕೊಂಡಿರುತ್ತೇವೆ. ಅದೇ ದಿನ ತಾಳಿಕೋಟಿ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ-3 ರಿಂದ 7 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಸಾಯಂಕಾಲ 5.15 ರಿಂದ 6.15 ರವರೆಗೆ ಅಪಘಾತವಾದ ಘಟನಾ ಸ್ಥಳಕ್ಕೆ ಬೇಟಿ ನೀಡಿ ಚಾಸಾ-1 ತೋರಿಸಿದ ಸ್ಥಳದಲ್ಲಿ ಚಾಸಾ2 ಮತ್ತು 3 ರವರ ಉಪಸ್ಥಿತಿಯಲ್ಲಿ ಘಟನಾ ಸ್ಥಳದ ಪಂಚನಾಮೆ ಜರುಗಿಸಿರುತ್ತೇನೆ. ನಿಪಿ3 ನ್ನು ನಿಪಿ2 ಬರೆಯವಾಗ ಸೆರೆ ಹಿಡಿಯಲಾಗಿದೆ. ಮುಂದಿನ ತನಿಖೆ ಕೆಲಸವನ್ನು ಚಾಸಾ-14 ರವರಿಗೆ ಹಸ್ತಾಂತರಿಸಿರುತ್ತೇನೆ'' ಎಂದು ಹೇಳುತ್ತಾರೆ ಇದಕ್ಕೆ ನಿವೇನು ಹೇಳುವಿರಿ?.

ಉತ್ತರಃ

07. ಪ್ರಾಸಾಃ11 ಪಾರ್ವತಿ ಕುರಿ ಇವರು ತಮ್ಮ ಸಾಕ್ಷ್ಯದಲ್ಲಿ" ಸುಮಾರು 4-5 ವರ್ಷದ ಹಿಂದೆ ನನ್ನ ಮಗ ರೇವಣಸಿದ್ದಪ್ಪ ಈತನಿಗೆ ರಜಾಕ, ಚಾಸಾ-8 ಮತ್ತು ಇತರರು ಕಲಕೇರಿ ಗ್ರಾಮದ ಜಾತ್ರೆಯಲ್ಲಿ ನಾಟಕ ನೋಡುವ ಸಲುವಾಗಿ ಕರೆದುಕೊಂಡು ಹೋಗಿದ್ದು, ನಾವು ನಮ್ಮ ಸಂಬಂಧಿಕರೊಬ್ಬರ ಅಂತಿಮ ಸಂಸ್ಕಾರಕ್ಕೆ ಹೋಗಿದ್ದು ವಾಪಸ್ಸು ಮನೆಗೆ ಬಂದಾಗ ನನ್ನ ಮಗ ನಮಗೆ ಚಾಸಾ-8 ಮತ್ತು ನ್ಯಾಯಾಲಯದ ಮುಂದಿರುವ ಆರೋಪಿ ಕಲಕೇರಿ ಜಾತ್ರೆಗೆ ಕರೆದುಕೊಂಡು ಹೋಗಿದ್ದು, ವಾಪಸ್ಸು ಬರುವಾಗ ಆರೋಪಿ ವಾಹನ ಅಪಘಾತಪಡಿಸಿದ್ದು, ಗಾಡಿ ಪಲ್ಟಿಯಾಗಿ ಬಿದ್ದಿದ್ದು ನನ್ನ ಮಗನಿಗೆ ಹೊಟ್ಟೆಗೆ ಒಳಪೆಟ್ಟಾಗಿದ್ದು, ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಮಾರನೆ ದಿನ ಮರಣ ಹೊಂದಿರುತ್ತಾನೆ. ನಾನು ಪೊಲೀಸ್ ಅಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಇರುತ್ತಾನೆ. ದಿ.12.12.19 ರಂದು ರಾತ್ರಿ 10 ಗಂಟೆಗೆ ನಾನು ನನ್ನ ಸೊಸೆ ಚಾಸಾ-1 ನಮ್ಮ ಸಂಬಂಧಿಕರ ಅಂತಿಮ ಸಂಸ್ಕಾರ ಹೋಗಿದ್ದೆವು ಎಂದರೆ ಸರಿ, ಸಾಕ್ಷಿ ಮುಂದುವರೆದು ನನ್ನ ಮಗ ರೇವಣಸಿದ್ದಪ್ಪ ನಮ್ಮೊಂದಿಗೆ ಬಂದಿದ್ದು ಆಗ ಚಾಸಾ-8 ಕಲಕೇರಿ ಜಾತ್ರೆಗೆ ಹೋಗಲು ಫೋನ್ ಮಾಡಿ ಕರೆದಾಗ ನನ್ನ ಮಗ ಚಾಸಾ-8 ಮತ್ತು ಆರೋಪಿಯೊಂದಿಗೆ ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ದಿ.13.12.19 ರಂದು ರಾತ್ರಿ 8 ಗಂಟೆಗೆ ನಾನು ಚಾಸಾ1 ವಾಪಸ್ಸು ಮನೆಗೆ ಬಂದಾಗ ನನ್ನ ಮಗ ಮನೆಯಲ್ಲಿ ನರಳುತ್ತಾ

ಬಿದ್ದಿದ್ದ ಎಂದರೆ ಸರಿ. ಆಗ ನನ್ನ ಮಗನಿಗೆ ನಾವು ಏನಾಯಿತು ಎಂದು ಕೇಳಿದೆವು. ಆಗ ನನ್ನ ಮಗ ಚಾಸಾ-8 ಮತ್ತು ನ್ಯಾಯಾಲಯದ 1 ಮುಂದಿರುವ ಆರೋಪಿ ಕಲಕೇರಿ ಗ್ರಾಮದ ಜಾತ್ರೆಗೆ ನಾಟಕ ನೋಡಲು ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳಿರುತ್ತಾನೆ. ನನ್ನ ಮಗ ಕಾರ್ ನಂಬರ ಕೆಎ 01 ಎಸಿ 8006 ನೇದ್ದರಲ್ಲಿ ಆರೋಪಿ ಚಾಸಾಃ8 ಮತ್ತು ತಾನು ಹೋಗಿದ್ದಾಗಿ ತಿಳಿಸಿದ, ನನ್ನ ಮಗ ಆರೋಪಿ ಸದರಿ ವಾಹನ ಅತೀಜೋರಾಗಿ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿದ್ದರಿಂದ ಸದರಿ ವಾಹನ ಅಪಘಾತಕ್ಕೆ ಈಡಾಯಿತು ಎಂದು ಹೇಳಿರುತ್ತಾನೆ, ನನ್ನ ಮಗ ಆರೋಪಿಗೆ ವಾಹನ ನಿದಾನವಾಗಿ ಚಲಾಯಿಸುವಂತೆ ಹೇಳಿದ್ದರೂ ಸಹ ಆರೋಪಿ ಸದರಿ ವಾಹನ ಅತೀಜೋರಾಗಿ ಚಲಾಯಿಸಿದ್ದರಿಂದ ವಾಹನ ಅಪಘಾತಕ್ಕೀಡಾಯಿತು ಎಂದು ಹೇಳಿದ. ಆರೋಪಿ ಸದರಿ ವಾಹನ ಅಸಕಿ ಗ್ರಾಮ ದಾಟಿ ಮರಗಮ್ಮ ದೇವಿ ದೇವಸ್ಥಾನದ - ಹತ್ತಿರ ಪಲ್ಟಿ ಮಾಡಿ ಅಪಘಾತಪಡಿಸಿರುತ್ತಾನೆ ಎಂದು ನನ್ನ ಮಗ ನನಗೆ ಈ ತಿಳಿಸಿರುತ್ತಾನೆ. ಆಗ ಕಾರ್ ಪಲ್ಟಿ ಆಗಿ ಬಿದ್ದಿದ್ದರಿಂದ ನನ್ನ ಮಗನಿಗೆ ಹೊಟ್ಟೆಗೆ ಒಳಪೆಟ್ಟಾಗಿದೆ ಎಂದು ನನ್ನ ಮಗ ನನಗೆ ತಿಳಿಸಿದ, ಚಾಸ-8 ರವರ ಬಲ ಮುಂಡಿಗೆ ಗಾಯವಾಗಿತ್ತು ಎಂದು ಹೇಳಿದ, ಆಗ ಆರೋಪಿ ನನ್ನ ಮಗನಿಗೆ ಮತ್ತು ಚಾಸಾಃ8 ರವರಿಗೆ ಖಾಸಗಿ ಜೀಪನಲ್ಲಿ ತಾಳಿಕೋಟಿಯ ಸಿದ್ದಬಸವ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಮನೆಗೆ ತಂದು ಬಿಟ್ಟ ಎಂದು ಹೇಳಿದ, ಚಾಸಾ8 ರವರಿಗು ಸಹ ಉಪಚಾರ ಕುರಿತು ಆಸ್ಪತ್ರೆಗೆ ದಾಖಲು ಮಾಡಿರುತ್ತದೆ, ಸದರಿ ಅಪಘಾತ ದಿ.13.12.19 ರ ಬೆಳಗಿನ 3.30 ಗಂಟೆಗೆ ಆಗಿತ್ತು ಎಂದು ನನ್ನ ಮಗ ನನಗೆ ಹೇಳಿದ, ದಿ.14.12.19 ರಂದು ಬೆಳಿಗ್ಗೆ 6 ಗಂಟೆಗೆ ನನ್ನ ಮಗ ಹೊಟ್ಟೆ ತ್ರಾಸ ಮಾಡಿಕೊಳ್ಳುತ್ತಿದ್ದುದರಿಂದ ಆತನಿಗೆ ಚಿಕಿತ್ಸೆ ಕುರಿತು ನಾನು ಚಾಸಾ1 ಸೇರಿ ಖಾಸಗಿ ವಾಹನದಲ್ಲಿ ತಾಳಿಕೋಟೆಗೆ ಕರೆದುಕೊಂಡು ಹೋಗುವಾಗ ತಾಳಿಕೋಟಿ ಸಮೀಪ ಮುಂಜಾನೆ 7 ಗಂಟೆ ಸುಮಾರಿಗೆ ಮರಣ ಹೊಂದಿದ, ಅಪಘಾತಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿ ಕಾರಣ ಎಂದು ನನ್ನ ಮಗ ಹೇಳಿರುತ್ತಾನೆ. ಈ ರೀತಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ" ಎಂದು ಹೇಳುತ್ತಾರೆ ಇದಕ್ಕೆ ನಿವೇನು ಹೇಳುವಿರಿ?.

ಉತ್ತರಃ

08. ಪ್ರಾಸಾಃ12 ಬಸಪ್ಪ ಕೋರಿ @ ಕುಂಟೋಜಿ ಇವರು ತಮ್ಮ ಸಾಕ್ಷ್ಯದಲ್ಲಿ" ಚಾಸಾ-1 ನನ್ನ ಅತ್ತಿಗೆ ಇರುತ್ತಾರೆ, ಚಾಸಾ-4 ನನ್ನ ತಾಯಿ ಮೃತ ರೇವಣಸಿದ್ದಪ್ಪ ಕೋರಿ ನನ್ನ ಅಣ್ಣ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ಇರುತ್ತಾರೆ. ಆರೋಪಿಯ ಹೆಸರು ಸಿದ್ಧನಗೌಡ ಪಾಟೀಲ ಇರುತ್ತದೆ. ಸುಮಾರು 5 ವರ್ಷದ ಹಿಂದೆ ಕೊಟಗಂಡಕಿ ಗ್ರಾಮದಲ್ಲಿ ಮರಣಹೊಂದಿದ್ದು, ಸದರಿ ಅವರ ಅಂತ್ಯ ಕ್ರಿಯೆಗೆ ನಾವೆಲ್ಲರೂ ಹೋದಾಗ ಚಾಸಾ-8 ನನ್ನ ಮೃತ ಅಣ್ಣ ರೇವಣಸಿದ್ದಪ್ಪ ಕೋರಿ ಇವರಿಗೆ ಫೋನ ಮಾಡಿ ಕಲಕೇರಿ ಗ್ರಾಮದಲ್ಲಿ ನಾಟಕ ನೋಡಲು ಹೋಗೋಣ ಎಂದು ಕರೆದಿರುತ್ತಾನೆ. ಅದರಂತೆ ನನ್ನ ಅಣ್ಣ ಚಾಸಾ-8 ಮತ್ತು ಆರೋಪಿಯೊಂದಿಗೆ ಕಲಕೇರಿ ಗ್ರಾಮಕ್ಕೆ ನಾಟಕ ನೋಡಲು ಹೋಗಿರುತ್ತಾರೆ, ವಾಪಾಸು ಬರುವಾಗ ರಸ್ತೆ ಅಪಘಾತ ಆಗಿರುತ್ತದೆ. ಸದರಿ ಅಪಘಾತದ ವಿಚಾರ ನನಗೆ ಬೆಳಗ್ಗೆ ಗೊತ್ತಾಗಿರುತ್ತದೆ. ನಾನು ಪೊಲೀಸರ ಮುಂದೆ ಅಪಘಾತದ ವಿವರದ ಹೇಳಿಕೆ ನೀಡಿರುತ್ತೇನೆ. ದಿ12.12.2019

ರಂದು ರಾತ್ರಿ 10.00 ಗಂಟೆಗೆ ಕಲಕೇರಿ ಗ್ರಾಮದಲ್ಲಿ ನಾಟಕ ನೋಡಲು ಚಾಸಾ-8, ಆರೋಪಿ, ನನ್ನ ಅಣ್ಣ ಮೃತ ರೇವಣ ಸಿದ್ದಪ್ಪ ಇವರು ಇಂಡಿಕಾ ಕಾರ ನಂ. ಕೆಎ 01 ಎಸಿ 8006 ನೇದರಲ್ಲಿ ಕಲಕೇರಿ ಗ್ರಾಮದ ನಾಟಕ ನೋಡಲು ಹೋಗಿದ್ದರು, ಮಾರನೆ ದಿನ ಅಂದರೆ ದಿ:13.12.2019 ರಂದು ನಸಿಕಿನ ಜಾವ 3.30 ಕ್ಕೆ ಸದರಿ ವಾಹನದ ಚಾಲಕನಾದ ನ್ಯಾಯಾಲಯದ ಮುಂದೆ ಇರುವ ಆರೋಪಿ ಸದರಿ ವಾಹನವನ್ನು ಅತಿ ವೇಗ ಮತ್ತು ನಿರ್ಲಲಕ್ಷತನದಿಂದ ಚಲಾಯಿಸಿ ಅಪಘಾತ ಪಡಿಸಿರುತ್ತಾನೆ, ಸದರಿ ಅಪಘಾತ ಅಸ್ಕಿ ಗ್ರಾಮ ದಾಟಿ ಮರ್ಗಮ್ಮ ದೇವಸ್ಥಾನದ ಹತ್ತಿರ ಆಗಿದ್ದು, ಅಪಘಾತದಲ್ಲಿ ಇಂಡಿಕಾ ಕಾರ ಪಲ್ಟಿ ಆಗಿದ್ದು, ಸದರಿ ಅಘಾತದ ಪರಿಣಾಮ, ಚಾಸಾ- 8 ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತು ಮೃತ ರೇವಣಸಿದ್ದಪ್ಪ ಕೋರಿ ಇವರಿಗೆ ಗಾಯಗಳು ಆಗಿರುತ್ತವೆ, ಚಾಸಾ- 8 ಅವರಿಗೆ ಬಲಮುಂದೆ ಗಾಯವಾಗಿದ್ದು ಮೃತ ರೇವಣಸಿದ್ದಪ್ಪ ಕೋರಿ ಹೊಟ್ಟೆಗೆ ಒಳಪೆಟ್ಟು ಆಗಿತ್ತು, ಆಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಮೃತ ರೇವಣಸಿದ್ದಪ್ಪ ಕೊರಿ ಇತನಿಗೆ ತಾಳಿಕೋಟೆಯ ಸಿದ್ದಬಸವ ಆಸ್ಪತ್ರೆಗೆ ಒಂದು ಖಾಸಗಿ ಜೀಪನಲ್ಲಿ ಕರೆದುಕೊಂಡು ಹೋಗಿ ಚಿಕಿತ್ಸೆ ಮೃತ ರೇವಣಸಿದ್ದಪ್ಪ ಕೋರಿ ಇತನ ಮನೆಗೆ ತಂದು ಬಿಟ್ಟು ಹೋಗಿರುತ್ತಾನೆ, ಚಾಸಾ-8 ಸಹ ತಾಳಿಕೋಟೆಯ ಸಿದ್ಧಬಸವ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾನೆ. ಈ ರೀತಿ ಜನ ಮಾತನಾಡುತ್ತಿದ್ದು, ಅದರ ಬಗ್ಗೆ ನನಗೆ ಗೊತ್ತಾಗಿರುತ್ತದೆ, ಸದರಿ ರಸ್ತೆ ಅಪಘಾತ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಅತೀ ವೇಗ ಹಾಗೂ ನಿಷಕಾಳಜಿತನದಿಂದ ವಾಹನ ಚಲಾಯಿಸುತ್ತಿದ್ದರಿಂದ ಅಪಘಾತವಾಗಿರುತ್ತದೆ, ದಿಃ14.12.2019 ಘಟನೆಯ ಬಗ್ಗೆ ಪೊಲೀಸ್ ಅಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ'' ಎಂದು ಹೇಳುತ್ತಾರೆ ಇದಕ್ಕೆ ನಿವೇನು ಹೇಳುವಿರಿ?.

ಉತ್ತರಃ

9. ನೀವು ಏನಾದರೂ ಹೇಳುವುದು ಇದೆಯಾ?

ಉತ್ತರಃ

10. ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಮಾಡಿಸುತ್ತಿರಾ?

ಉತ್ತರಃ

ದಿನಾಂಕಃ

ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಮುದ್ದೇಬಿಹಾಳ.

ಆರೋಪಿಯ ಸಹಿಃ